**ಶಿಕ್ಷಣಕ್ಕೆ ಮಹತ್ವ ನೀಡಿ ನಾಡಿನ ಭವಿಷ್ಯವನ್ನು ಭವ್ಯವಾಗಿಸಿದ ನಾಲ್ವಡಿ: ನಾಡೋಜ ಡಾ.ಮಹೇಶ ಜೋಶಿ ವಿಶ್ಲೇಷಣೆ**

ಬೆಂಗಳೂರು: ವಿದ್ಯೆಯು ಆತ್ಮವಿಶ್ವಾಸವರ್ಧಕ, ವಿಪತ್ತಿನ ರಕ್ಷಕ, ಉದ್ಯೋಗದಾಯಕ, ಜೀವನ ಮಾರ್ಗದರ್ಶಕ ಎಂಬುದನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅರಿತಿದ್ದರು. ಸಾಮಾಜಿಕ ಬದಲಾವಣೆಗೆ, ದೇಶದ ಸಂಪತ್ತಿಗೆ ವಿದ್ಯೆಯು ಮೂಲ ಎಂದು ಅರಿತು ನಾಲ್ವಡಿಯವರು ೧೯೧೫ ರಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದರು; ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಉಚಿತವಾಗಿಸಿದರು; ಶಿಕ್ಷಣವನ್ನು ಗ್ರಾಮೀಣಪ್ರದೇಶಕ್ಕೆ ವಿಸ್ತರಿಸಿದರು. ಮಹಿಳೆಯರ ವಿದ್ಯಾಭ್ಯಾಸವೆಂದರೆ ಅದೊಂದು ಕುಟುಂಬದ ಶಿಕ್ಷಣವೆಂದು ಭಾವಿಸಿ ಮಹಾರಾಣಿ ಬಾಲಿಕಾ ಪಾಠಶಾಲೆಗೆ ನೆರವಿತ್ತು ಪ್ರೋತ್ಸಾಹಿಸಿದರು. ೧೯೦೦ರಲ್ಲಿ ಅದನ್ನು ಸೆಕೆಂಡ್ಗ್ರೇಡ್ ಕಾಲೇಜಾಗಿಸಿ, ೧೯೦೧ ರಲ್ಲಿ ಮಹಾರಾಣಿ ಕಾಲೇಜಾಗಿಸಿದರು. ವಿದ್ಯಾ ಸಂಸ್ಥೆಗಳ ಸಂಖ್ಯೆ ಹೆಚ್ಚಿಸಿದರು. ಇದರಿಂದ ಪ್ರಜೆಗಳ ಜ್ಞಾನಾರ್ಜನೆ ಹೆಚ್ಚಿತು. ಉನ್ನತ ಶಿಕ್ಷಣಕ್ಕೆ, ಶಿಕ್ಷಣದ ವೃತ್ತಿಪರ ಮುಖಗಳಿಗೆ ನಾಲ್ವಡಿಯವರು ಆದ್ಯತೆಯಿತ್ತರು ಎಂದು ನಾಡೋಜ ಡಾ.ಮಹೇಶ ಜೋಶಿಯವರು ವಿಶ್ಲೇಷಿಸಿದರು. ಅವರು ಇಂದು ಕನ್ನಡ ಸಾಹಿತ್ಯ ಪರಿಷತ್ತು ಇಂದು ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ನಡೆದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 140ನೆಯ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿದ್ದು ನಾಡಿನಲ್ಲಿ ಹೊಸಶಕೆಯನ್ನು ಆರಂಭಿಸಿತು. ಇದರಿಂದ ವಿದ್ಯಾವಿಕಾಸಕ್ಕೆ, ಉನ್ನತ ಶಿಕ್ಷಣದ ಕಲಿಕೆ-ಬೋಧನೆಗಳಿಗೆ, ನಾಡಿನ ಜ್ಞಾನವಂತಿಕೆಗೆ ಸ್ಥಳೀಯ ನೆಲೆ ದೊರತಂತಾಯಿತು. ವ್ಯವಸಾಯಾಭಿವೃದ್ಧಿಗಾಗಿ ಬೆಂಗಳೂರಿನ ಹೆಬ್ಬಾಳಿನಲ್ಲಿ ಒಂದು ವಿದ್ಯಾಸಂಸ್ಥೆಯನ್ನು ಪ್ರಯೋಗಕ್ಷೇತ್ರವನ್ನು ನಿರ್ಮಿಸಲಾಯಿತು (೧೯೧೩). ವಿದ್ಯೆಯನ್ನು ಸಾಂಪ್ರದಾಯಿಕ ಬೇಲಿಯಿಂದ ಹೊರತಂದು, ಅದಕ್ಕೆ ಆಧುನಿಕತೆಯ ಸ್ಪರ್ಶ ನೀಡಿ ವರ್ತಮಾಕ್ಕೆ ಅದು ಉಪಯುಕ್ತವಾಗುವಂತೆ ಮಾಡಿದ್ದು ನಾಲ್ವಡಿಯವರ ದೊಡ್ಡ ಸಾಧನೆ ಎಂದು ನಾಡೋಜ ಡಾ.ಮಹೇಶ ಜೋಶಿಯವರು ವಿಶ್ಲೇಷಿಸಿದರು.

ಮಲೇರಿಯಾ, ಕಾಲರಾ, ಸಿಡುಬು, ಕ್ಷಯರೋಗಗಳ ತೀವ್ರತೆ, ಸಾಂಕ್ರಾಮಿಕತೆ ನಾಲ್ವಡಿಯವರ ಕಾಲದಲ್ಲಿ ಹೆಚ್ಚಾಗಿತ್ತು. ಹಾಗಾಗಿ ಪ್ರತಿ ತಾಲ್ಲೂಕು, ಹೋಬಳಿಗಳಲ್ಲಿ ಡಿಸ್ಪೆನ್ಸರಿ, ಚಿಕಿತ್ಸಾ ಕೇಂದ್ರಗಳನ್ನು ೩೦೦ ರ ಮಟ್ಟಿಗೆ ಸಂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಮಹಾರಾಜರು ತೆರೆದರು. ಎತ್ತಿನ ಗಾಡಿಗಳಲ್ಲಿ ಪ್ರಯಾಣಿಸಿ ಚಿಕಿತ್ಸೆ ನೀಡುವ ಏರ್ಪಾಡನ್ನು ಮಲೆನಾಡಿನಲ್ಲಿ ತಂದರು. ಪ್ರತಿ ವರ್ಷವೂ ವೈದ್ಯಕೀಯಕ್ಕೆ ಸುಮಾರು ೧೯.೫೦ ಲಕ್ಷ ರೂಪಾಯಿ ವೆಚ್ಚ ಮಾಡಿದರು. ವಾರ್ಷಿಕ ಪರೀಕ್ಷೆಗಳು, ಹೌಸ್ ಸರ್ಜನ್ಸಿಯೊಂದಿಗೆ ಬೆಂಗಳೂರಿನಲ್ಲಿ ಮೆಡಿಕಲ್ ಕಾಲೇಜು ೧೯೨೪ ರಲ್ಲಿ ಮತ್ತೆ ಅದೇ ಮೈಸೂರಿನಲ್ಲಿ ೧೯೩೦ ರಲ್ಲಿ ಜನ್ಮತಾಳಿತು. ಭಾರಿ ಭಾರಿ ಆಸ್ಪತ್ರೆಗಳು ಆ ಕಾಲದಲ್ಲಿ ನಿರ್ಮಾಣಗೊಂಡವು. ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ ಈ ಸಂಖ್ಯೆಯ, ಈ ಸೌಂದರ್ಯದ ಆಸ್ಪತ್ರೆಗಳನ್ನು ಕಟ್ಟಿಸಿದ ಮತ್ತೊಬ್ಬ ಅರಸರು ಈ ದೇಶದಲ್ಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಾದ ಅವರ ಜನ್ಮದಿನದಂದು ಅವರ ಮಹತ್ವದ ಕೊಡುಗೆಗಳನ್ನು ಕೃತಜ್ಞತೆಯಿಂದ ನೆನಪು ಮಾಡಿ ಕೊಳ್ಳುತ್ತಿದ್ದೇವೆ ಎಂದು ನಾಡೋಜ ಡಾ.ಮಹೇಶ ಜೋಶಿಯವರು ಹೇಳಿದರು.

ಉದ್ಘಾಟನಾ ಭಾಷಣವನ್ನು ಮಾಡಿದ ಹಿರಿಯ ವಿಜ್ಞಾನ ಬರಹಗಾರರಾದ ಟಿ.ಆರ್.ಅನಂತರಾಮು ಅವರು ಮಹಾತ್ಮ ಗಾಂಧಿಯವರಿಂದಲೇ ರಾಜರ್ಷಿ ಎಂಬ ಹೆಗ್ಗಳಿಕೆಯನ್ನು ಪಡೆದಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತ ವೈಖರಿಯನ್ನು ನೋಡಿ ಬ್ರಿಟೀಷ್ ಸಂಸ್ಥಾನವೇ ಹತ್ತು ಲಕ್ಷ ರೂಪಾಯಿಗಳಷ್ಟು ಸಂಸ್ಥಾನ ನೀಡ ಬೇಕಿದ್ದ ಕೊಡುಗೆಯನ್ನು ಕಡಿಮೆ ಮಾಡಿತ್ತು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಗಣನೀಯ ಪ್ರಗತಿ ಸಾಧಿಸಿದ ಮೈಸೂರು ಸಂಸ್ಥಾನವು ನಾಲ್ವಡಿಯವರ ಅವಧಿಯಲ್ಲಿ ತಾಂತ್ರಿಕವಾಗಿ ಕೂಡ ಬೆಳವಣಿಗೆಯನ್ನು ಕಂಡಿತು. ವಿದ್ಯುತ್ ತಂದಿದ್ದು ಅವರ ದೊಡ್ಡ ಕೊಡುಗೆ ಎಂದು ವಿಶ್ಲೇಷಿಸಿದರು. ನಾಲ್ವಡಿಯವರ ಕೊಡುಗೆಗಳ ಕುರಿತು ವಿಶೇಷ ಉಪನ್ಯಾಸ ನೀಡಿದ ಸಾಮಾಜಿಕ ಇತಿಹಾಸಕಾರರಾದ ಧರ್ಮೇಂದ್ರ ಕುಮಾರ್ ಅವರು ನಾಲ್ವಡಿಯವರ ಜೀವನ ಸುಖದ ಸುಪ್ಪತ್ತಿಗೆಯಾಗಿರಲಿಲ್ಲ ಪ್ರತಿ ಕ್ಷಣವೂ  ಅವರು ಸವಾಲುಗಳನ್ನು ಎದುರಿಸಿ ಬೆಂಕಿಯಲ್ಲಿ ಅರಳಿದ ಹೂವಾಗಿ ಹೊರ ಹೊಮ್ಮಿದರು.ತಮ್ಮನ್ನೇ ಗಂಧದ ಹಾಗೆ  ತೇಯ್ದು ಕೊಂಡು ನಾಡಿನ ಭವಿಷ್ಯವನ್ನು ಉಜ್ವಲವಾಗಿಸಿದರು ಎಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೀವನದ ಕೆಲವು ಘಟನೆಗಳನ್ನು ವಿಶ್ಲೇಷಿಸುತ್ತಾ ಗುರುತಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗ ಶೆಟ್ಟರು ಸ್ವಾಗತವನ್ನು ಕೋರಿದರೆ ಇನ್ನೊಬ್ಬ ಕಾರ್ಯದರ್ಶಿಗಳಾದ ಡಾ.ಪದ್ಮಿನಿ ನಾಗರಾಜು ವಂದನಾರ್ಪಣೆಯನ್ನು ಸಲ್ಲಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾದ ಡಾ.ಪಟೇಲ್ ಪಾಂಡು ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿರುವ ಶ್ರೀಮಾನ್ ನಾಲ್ವಡಿ ಕೃಷ್ಣರಾಜ  ಒಡೆಯರ್ ಅವರ ಪ್ರತಿಮೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು ಸೇರಿದಂತೆ ಗಣ್ಯರು ಮಾಲಾರ್ಪಣೆ ಮಾಡಿದರು.

**ಎನ್.ಎಸ್.ಶ್ರೀಧರ ಮೂರ್ತಿ**

ಸಂಚಾಲಕರು, ಪ್ರಕಟಣಾ ವಿಭಾಗ, ಕನ್ನಡ ಸಾಹಿತ್ಯ ಪರಿಷತ್ತು